# ಕರಗುತ್ತಿರುವ ಸಹ್ಯಾದ್ರಿಯ ಉಳಿವು ಏಕೆ ಮುಖ್ಯ?

ನಾಡಿನ ಬಹುಪಾಲು ನದಿಗಳ ಮೂಲವಿರುವುದು ಪಶ್ಚಿಮಘಟ್ಟ ಶ್ರೇಣಿಯಲ್ಲಲ್ಲವೇ? ಇಲ್ಲಿನ ಕಾಡು–ಕಣಿವೆಗಳಲ್ಲಿ ಹುಟ್ಟುವ ಅಸಂಖ್ಯ ಚಿಕ್ಕಪುಟ್ಟ ತೊರೆಗಳೆಲ್ಲ ಸೇರಿ ನದಿಗಳ ಒಡಲು ತುಂಬುತ್ತಿವೆ. ಇಲ್ಲಿನ ಪರ್ವತಶ್ರೇಣಿ ಹಾಗೂ ವೈವಿಧ್ಯಮಯ ಕಾಡು ನಿರ್ಮಿಸಿದ ವಿಶಿಷ್ಟ ವಾತಾವರಣವೇ ಇಲ್ಲಿ ಹೆಚ್ಚು ಮಳೆಬೀಳುವಂಥ ಪರಿಸರ ನಿರ್ಮಿಸಿರುವುದು. ನಿತ್ಯ ಹರಿದ್ವರ್ಣ, ಎಲೆ ಉದುರಿಸುವ ಕಾಡು, ಶೋಲಾಗಳು, ಪರ್ವತ ಹುಲ್ಲುಗಾವಲುಗಳು, ಕಣಿವೆಯ ಜೌಗು ಪ್ರದೇಶಗಳು – ಹೀಗೆ ಇಲ್ಲಿನ ಅರಣ್ಯದಲ್ಲಿ ಬಹುವೈವಿಧ್ಯವಿದೆ; ಒಂದೊಂದರಲ್ಲೂ ವೈಶಿಷ್ಟ್ಯವಿದೆ. ಇದಕ್ಕಾಗಿಯೇ ಇಲ್ಲಿ ಅಸಂಖ್ಯ ಬಗೆಯ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳು ವಿಕಾಸವಾಗಿರುವುದು. ಹುಲಿ–ಆನೆಗಳಂಥ ಬೃಹತ್ ಸಸ್ತನಿಗಳು, ಅಸಂಖ್ಯ ಔಷಧಿಮೂಲಿಕೆಗಳು, ಸಾಂಬಾರು ಬೆಳೆಗಳ ವನ್ಯತಳಿಗಳು, ಪಕ್ಷಿ–ಕೀಟ ವೈವಿಧ್ಯ..., ಏನೆಲ್ಲ! ಈ ಜೀವಸಂಪತ್ತನ್ನು ರಕ್ಷಿಸಿಕೊಳ್ಳುವುದರಲ್ಲೇ ಭವಿಷ್ಯದ ಹಿತವಡಗಿದೆ ಎಂದು ಪರಿಸರವಿಜ್ಞಾನ ಎಚ್ಚರಿಸುತ್ತಲೇ ಇದೆ. ‘ಜೀವವೈವಿಧ್ಯ ಕಾನೂನು’ (2006) ಅನ್ವಯ ರಚಿತವಾಗಿರುವ ‘ಜೀವವೈವಿಧ್ಯ ಮಂಡಳಿ’ಯು ಇವನ್ನೆಲ್ಲ ರಕ್ಷಿಸಿ ನಿರ್ವಹಿಸುವ ಉಪಾಯಗಳನ್ನು ರೂಪಿಸಲು ಪ್ರಯತ್ನಿಸುತ್ತಿದೆ.

ಆದರೆ ಆಗುತ್ತಿರುವುದಾದರೂ ಏನು? ಈ ಸೂಕ್ಷ್ಮ ಸಹ್ಯಾದ್ರಿ ಶ್ರೇಣಿಯಲ್ಲೇ ಒತ್ತಡವೂ ನಿರಂತರವಾಗಿ ಹೆಚ್ಚುತ್ತಿದೆ. ಏರುತ್ತಿರುವ ಜನಸಂಖ್ಯೆ ಹಾಗೂ ಅವರು ಬಯಸುತ್ತಿರುವ ಭಾರಿ ಅಭಿವೃದ್ಧಿ ಯೋಜನೆಗಳು ಇಲ್ಲಿನ ಕಾಡನ್ನು ಕರಗಿಸಿವೆ. ಸಾಲದೆಂಬಂತೆ, ಹೊಸದಾಗಿ ಹಮ್ಮಿಕೊಳ್ಳುತ್ತಿರುವ ರೈಲುಮಾರ್ಗಗಳು, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಭಾರೀ ವಿದ್ಯುತ್ ಮಾರ್ಗಗಳು ಪಶ್ಚಿಮಘಟ್ಟವನ್ನು ಅಡ್ಡಡ್ಡವಾಗಿ ಸೀಳುತ್ತಿವೆ. ಭೂಕಬಳಿಕೆ ಹಾಗೂ ಅತಿಕ್ರಮಣವಂತೂ ವ್ಯಾಪಕವಾಗುತ್ತಿದೆ. ಅವೈಜ್ಞಾನಿಕ ಭೂಬಳಕೆಯಿಂದಾಗಿ ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡದಲ್ಲಿ ಭಾರಿ ಭೂಕುಸಿತವಾಗುತ್ತಿರುವುದನ್ನು ಭೂಗರ್ಭಶಾಸ್ತ್ರಜ್ಞರು ದಾಖಲಿಸಿದ್ದಾರೆ. ಕೈಗಾರಿಕೆ ಹಾಗೂ ಜನವಸತಿಗಳ ತ್ಯಾಜ್ಯಗಳಿಂದಾಗಿ ನದಿ–ಕೆರೆಗಳು ಗಂಭೀರ ಮಾಲಿನ್ಯಕ್ಕೆ ತುತ್ತಾಗುತ್ತಿವೆ. ಪರಿಸರ ಹಾಗೂ ಬದುಕಿನ ಸುರಕ್ಷತೆಯ ಕೀಲಿಕೈ ಆಗಿರುವ ಈ ಸೂಕ್ಷ್ಮ ಪ್ರದೇಶ ಇಂದು ತೀರಾ ಅಪಾಯದಂಚಿಗೆ ಬಂದುನಿಂತಿದೆ.

ಈ ಅಪಾಯದ ಬೆಳವಣಿಗೆಗಳ ಕುರಿತು, ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದ ‘ಅರಣ್ಯ ಸರ್ವೇಕ್ಷಣಾ ಸಂಸ್ಥೆ’ಯು (Forest Survey of IndiaFSI) ಪ್ರತಿ ಎರಡು ವರ್ಷಗಳಿಗೊಮ್ಮೆ ಪ್ರಕಟಿಸುವ ‘ಭಾರತದ ಅರಣ್ಯ ಪರಿಸ್ಥಿತಿ ವರದಿ’ಗಳು (India State of Forest Report) ಎಚ್ಚರಿಸುತ್ತಲೇ ಇವೆ. 2019ರಲ್ಲಿ ಪ್ರಕಟವಾದ ಇತ್ತೀಚಿನ ವರದಿಯಲ್ಲಿಯೂ, ಪಶ್ಚಿಮಘಟ್ಟವೂ ಸೇರಿದಂತೆ ಎಲ್ಲೆಡೆ ಅರಣ್ಯವು ಛಿದ್ರವಾಗುತ್ತಿರುವುದನ್ನು ದಾಖಲಿಸಲಾಗಿದೆ. ಆ ಮೂಲಕ ನದಿಮೂಲಗಳು, ವನ್ಯಜೀವಿಗಳ ಆವಾಸಸ್ಥಾನ, ವನ್ಯಪ್ರಾಣಿಗಳು ಹಾಗೂ ಜೀವವೈವಿಧ್ಯವೆಲ್ಲ ಮಾಯವಾಗುತ್ತಿರುವುದರ ಅಪಾಯದ ಕುರಿತು ಎಚ್ಚರಿಸಲಾಗಿದೆ. ಈಗ ದೇಶದಲ್ಲಿ ಕೇವಲ ಶೇ. 21.67 ಮಾತ್ರ ಅರಣ್ಯವಿದ್ದು,

ಪ್ರಾಧಿಕಾರ’, ‘ರಾಷ್ಟ್ರೀಯ ವನ್ಯಜೀವಿ ಮಂಡಳಿ’, ಡೆಹರಾಡೂನಿನ ‘ವನ್ಯಜೀವಿ ಸಂಶೋಧನಾ ಸಂಸ್ಥೆ’ – ಇವೆಲ್ಲ ಯೋಜನೆಯ ಅಪಾಯಗಳನ್ನು ಸರ್ಕಾರಕ್ಕೆ ಮನದಟ್ಟು ಮಾಡಿದ್ದವು. ಸರ್ವೋಚ್ಚ ನ್ಯಾಯಾಲಯದ ಉನ್ನತಾಧಿಕಾರದ ಸಮಿತಿಯು ಈ ಪ್ರದೇಶದ ಜನರ ಭವಿಷ್ಯದ ಸುರಕ್ಷತೆಗೂ ಇದು ಭಂಗ ತರಬಲ್ಲದೆಂದು ಅಭಿಪ್ರಾಯಪಟ್ಟಿದೆ. ರಾಜ್ಯದ ವನ್ಯಜೀವಿ ಮಂಡಳಿಯೂ ಈ ಮೊದಲು ಹಲವು ಬಾರಿ ಈ ಯೋಜನೆಯನ್ನು ತಿರಸ್ಕರಿಸಿತ್ತು. ಆದರೆ ಇದೀಗ, ರಾಜಕೀಯ ಒತ್ತಡಕ್ಕೆ ಮಣಿದು ದಿಢೀರ್ ಆಗಿ ಒಪ್ಪಿಗೆ ಕೊಟ್ಟಿದೆ! ಪರಿಸರ ಸಂರಕ್ಷಣೆ ಹಾಗೂ ಬದುಕಿನ ಸುರಕ್ಷತೆಯ ಆಶಯಕ್ಕಾಗಿಯೇ ರೂಪಿತವಾಗಿರುವ ಹಲವು ಕಾನೂನುಗಳ ಸಂರಕ್ಷಣಾ ಬಲೆಯನ್ನು ಹರಿದು, ರೈಲು ಓಡಲು ಸರ್ಕಾರವೇ ದಾರಿ ಮಾಡಿಕೊಡುತ್ತಿರುವದು ವಿಡಂಬನೆಯಲ್ಲವೇ?

ಇನ್ನೊಂದು ವಿರೋಧಾಭಾಸವೂ ಇದೆ. ಹಲವು ಸಲ ಅನುಮತಿಯನ್ನು ನಿರಾಕರಿಸಿದ್ದರಿಂದ, 2012ರಲ್ಲಿ ಕರ್ನಾಟಕ ಸರ್ಕಾರದ ಮೂಲಸೌಕರ್ಯ ಇಲಾಖೆಯು ಪುನಃ ಅರ್ಜಿ



ಮೀನುಗಾರರಿಬ್ಬರು ಮುಂಜಾವಿನಲಿ ಗಂಗಾವಳಿ ನದಿಯಲ್ಲಿ ಮೀನು ಹಿಡಿಯುತ್ತಿರುವುದು. ಗಂಗಾವಳಿ ನದಿಯ ಮೇಲೆ ರೈಲು ಯೋಜನೆ ಬೀರುವ ಪರಿಣಾಮ ಸಹಸ್ರಾರು ಮೀನುಗಾರರ ಕುಟುಂಬದವರ ಪಾಲಿಗೆ ಶಾಪವಾಗಬಹುದು. ಚಿತ್ರ: ದಿನೇಶ್ ಹೆಗಡೆ ಮಾನೀರ್